ಕನ್ನಡದ ಸದ್ಯದ ಒಳ್ಳೆಯ ಪ್ರಬಂಧಕಾರರಲ್ಲಿ ಒಬ್ಬರಾದ ಯೋಗೀಂದ್ರ ಮರವಂತೆ, ತಮ್ಮ ಬರಹಗಳ ಮೂಲಕ ಓದುಗರಿಗೆ ಕಾಣಿಸುತ್ತಿರುವ ಕಿಟಕಿಗಳು ಹಲವು ಹಾಗೂ ವೈವಿಧ್ಯದಿಂದ ಕೂಡಿದವು. ಉಡುಪಿ ಜಿಲ್ಲೆಯ ಮರವಂತೆಯ ಅವರು, ಇಂಗ್ಲೆಂಡ್‌ನ ಬ್ರಿಸ್ಟಲ್ ನಗರದಲ್ಲಿನ 'ಏರ್ ಬಸ್' ಕಂಪನಿಯಲ್ಲಿ ವಿಮಾನಶಾಸ್ತ್ರ ತಂತ್ರಜ್ಞರು. 'ಏರೋ ಪುರಾಣ', 'ನನ್ನ ಕಿಟಕಿ', 'ಲಂಡನ್ ಡೈರಿ – ಅನಿವಾಸಿಯ ಪುಟಗಳು', 'ಮುರಿದ ಸೈಕಲ್ ಹುಲಾ ಹೂಪ್ ಹುಡುಗಿ' ಯೋಗೀಂದ್ರರ ಕೃತಿಗಳು. ಊರಿಗೆ ಬಂದಾಗ ಯಕ್ಷಗಾನ ಪ್ರದರ್ಶನಗಳಲ್ಲಿ ಭಾಗಿಯಾಗುವ ಅವರು, ಇಂಗ್ಲೆಂಡ್‌ನಲ್ಲೂ ಯಕ್ಷ ಕಂಪು ಪಸರಿಸುವಲ್ಲಿ ನಿರತರು.

ಭಾರತೀಯ ಬಿಯರನ್ನು ನೊರೆಚೆಲ್ಲುವ ತನಕ ತುಂಬಿಸಿ ಕುಡಿದು, ಆಯಾದಿನದ ತಮ್ಮ ತಮ್ಮ ಅನುಭವ ಅಚ್ಚರಿಗಳನ್ನೂ ಹಂಚಿಕೊಳ್ಳುವವರು. ಅವರೆಲ್ಲರೂ ಭಾರತವನ್ನು, ಬೆಂಗಳೂರನ್ನು ಮೊದಲ ಬಾರಿ ಕಂಡವರು ಅಲ್ಲ, ಅನುಭವಿಸಿದವರು. ಯಾವುದೇ ಹೊಸ ಊರು, ದೇಶ, ಸಂಸ್ಕೃತಿ, ಬರೇ ಕಣ್ಣು ಕಿವಿ ನಾಲಿಗೆ ಮೂಲಕ ಮಾತ್ರ ಮನಸ್ಸಿನಲ್ಲಿ ಇಳಿಯುವುದು ಉಳಿಯುವುದಲ್ಲ. ನಮ್ಮ ನಮ್ಮ ಗಮನಿಸುವಿಕೆಯ ಖಾಲಿ ಅವಕಾಶಕ್ಕೆ ಹೊಂದಿಕೊಂಡು ಗ್ರಹಿಕೆಯ ಎಲ್ಲ ಆಯಾಮ ಮಾರ್ಗಗಳಿಂದ ನಮ್ಮನ್ನು ಹೀಗೆ ಎಂದು ಪೂರ್ತಿ ವಿವರಿಸಲಾಗದ ಸಮಗ್ರ ಅನುಭವವಾಗಿ ಸೇರಿ ನೆಲೆ ನಿಲ್ಲುತ್ತದೆ. ಭಾರತ ಎಂದರೆ ಹೀಗೆ, ಬೆಂಗಳೂರಿನ ವಾಸ ಎಂದರೆ ಹಾಗೆ, ಅಲ್ಲಿನ ಜನರು ಈ ತರಹ, ಅಲ್ಲಿನ ಜೀವನ ಹೀಗೆ, ಎಂದೆಲ್ಲ ಮನಸ್ಸಿನಲ್ಲುಳಿಯುತ್ತದೆ. ಆ ಮೂವರಲ್ಲಿ ಇಬ್ಬರು ಯುನೈಟೆಡ್ ಕಿಂಗ್‌ಡಮ್‌ನ ಬೇರೆ ಬೇರೆ ಭಾಗಗಳಲ್ಲಿ ಬೆಳೆದು ಓದಿ ಕೊನೆಗೆ ನಮ್ಮ ಬ್ರಿಸ್ಟಲ್ ಕಚೇರಿ ಸೇರಿದವರು. ಮೂರನೆಯವನು, ದೂರದಿಂದ ನಿಂತು ನೋಡಿದರೆ ಭಾರತೀಯ ಸಂಸ್ಕೃತಿಗೆ ತುಸು ಹೋಲಿಕೆ ಇದ್ದಂತೆ ತೋರುವ ಮಲೇಷ್ಯಾ ದೇಶದವನು. ಬೆಂಗಳೂರಿನ ಸಹೋದ್ಯೋಗಿಗಳಿಗೆ ಆ ಮೂವರೂ ಇಂಗ್ಲೆಂಡ್‌ನವರು ಆದರೂ ಮೂಲ ಹುಡುಕಿದರೆ ಅವರೂ ಬೇರೆ ಬೇರೆ ದಿಕ್ಕುಗಳಿಂದ ಬಂದು, ದೂರದಿಂದ ನೋಡುವವರಿಗೆ ಅಸಲಿ ಆಂಗ್ಲರು ಎಂದು ಕಾಣಿಸುವವರು. ಭಾರತದೊಳಗೆ ಕಾಲಿಟ್ಟ ಮೇಲೆ ಭಾರತೀಯ ಸಂಸ್ಕೃತಿ ಎಂದರೆ ಯಾವುದು ಎಂದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭೂಹರಹಿನಲ್ಲಿ ನಿಂತು ನಿರಂತರ ಹಗಲು ರಾತ್ರಿ ನಾವು ಜಿಜ್ಞಾಸೆ ಮಾಡಬಹುದಾದಷ್ಟು ವೈವಿಧ್ಯ ಇರುವುದರಿಂದ, ಆ ಮೂವರಿಗೂ ಕಳೆದ ಕೆಲವು ದಿನಗಳಲ್ಲಿ 'ಇವಿಷ್ಟು ಮಾತ್ರ' ಭಾರತ ಅಥವಾ ಬೆಂಗಳೂರು ಎಂದು ತೀರ್ಮಾನಕ್ಕೆ ಬರುವುದು ಕಷ್ಟ ಆಗಿರಬಹುದು. ಯಾವುದೋ ದೇಶದಿಂದ ಬೆಂಗಳೂರನ್ನು ಓದಿ ಕೇಳಿದವರಿಗೆ ಅಥವಾ ಸಣ್ಣ ಭೇಟಿಗೆಂದು ಹೋಗಿ ಬಂದವರಿಗೆ ಭಾರತದ ಯಾವ ಊರುಕೇರಿಗೆ ಹೋದರೂ ಒಂದಿಷ್ಟು ಸಾಮಾನ್ಯ ಅನುಭವಗಳು ಆಗುವುದಿದೆ. ಅದನ್ನು ಆ ದೇಶದ ಸಂಸ್ಕೃತಿಯೆಂದು ಆ ಪ್ರವಾಸಿಗರು ಗ್ರಹಿಸುವುದಿದೆ. ಮತ್ತೆ ಆಯಾ ಊರಿನಲ್ಲಿ ಮಾತ್ರ ಸಿಗುವ ವಿಶೇಷ ಅನುಭವಗಳೂ ಇವೆ. ಹೀಗೆ ಸಾಮಾನ್ಯ ವೈಯಕ್ತಿಕ ವಿಶೇಷ ಅನುಭವಗಳನ್ನು ಕೂಡಿಸಿಕೊಂಡು ಆ ವಿದೇಶಿ ಅತಿಥಿಗಳು ಬೆಂಗಳೂರು ಮತ್ತು ಅಲ್ಲಿನ ಜನರ ಬಗ್ಗೆ ಕಲ್ಪನೆಗಳನ್ನು ಜೋಡಿಸಿಕೊಂಡು ಇದೀಗ ಇಂಗ್ಲೆಂಡ್‌ಗೆ ಮರಳಿದ್ದಾರೆ. ಬೆಂಗಳೂರಿನಲ್ಲಿ ಸಿಕ್ಕ ಅಧಿಕೃತ ಭಾರತೀಯ ಅಲ್ಲ ಬೆಂಗಳೂರು ಅಡುಗೆಯ ಸವಿ, ಸಹೋದ್ಯೋಗಿಗಳ ಪ್ರೀತಿಪೂರ್ವಕ ಉಪಚಾರ, ಸರಳ ಮುಗ್ಧ ನಗೆಗಳು, ಕಿವಿತುಂಬುವ ವಾಹನಗಳ ಸ್ಫೋಟಕ ಸದ್ದು, ಕರ್ಕಶ ಹಾರ್ನ್, ಅವ್ಯವಸ್ಥೆಯ ಅಶಿಸ್ತಿನ ವಾಹನ ಚಲಾಯಿಸುವಿಕೆ, ಕಾರಿನ ಗಾಜು ಇಳಿಸಿದರೆ ಅಥವಾ ಬೀದಿಯಲ್ಲಿ ನಾಲ್ಕು ಹೆಜ್ಜೆ ನಡೆದರೆ ಆವರಿಸುವ ಅರ್ಥವಾಗದ ಭಾಷೆಯ ಹಲವು ಸೊಲ್ಲುಗಳು, ಗಡಿಬಿಡಿ, ದುರುಗುಟ್ಟುವಿಕೆ, ತಮ್ಮನ್ನು ಕುತೂಹಲದಿಂದ ಹಿಂಬಾಲಿಸುವ ಅಚ್ಚರಿಯ ಕಣ್ಣುಗಳು ಇತ್ಯಾದಿ ಇತ್ಯಾದಿಗಳನ್ನು ಸಾಮಾನು ಸರಂಜಾಮುಗಳ ಜೊತೆಗೆ ಹೊತ್ತು ಸಾಗಿದ್ದಾರೆ.

ಈ ಮೂವರೂ ತಮ್ಮ ಕೆಲಸ ಮುಗಿಸಿ ಇಂಗ್ಲೆಂಡ್‌ಗೆ ಮರಳಿದ ಮೇಲೆ ಮೊನ್ನೆ ಮೊನ್ನೆ ನಾನು